ರಾಜ್ಯದಲ್ಲಿ ನೇಕಾರರು ಅನುಭವಿಸುತ್ತಿರುವ ಕಷ್ಟ

2097 (2288) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನೇಕಾರರು ನಷ್ಟ ಅನುಭವಿಸಿ ಜೀವನ ನಿರ್ವಹಣೆಗೆ ತುಂಬಾ ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಎಷ್ಟು ಜನ ನೇಕಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ;

ಇ) ನೇಕಾರರ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಮೃತ ನೇಕಾರರ ಕುಟುಂಬಗಳಿಗೆ ಸರ್ಕಾರದಿಂದ ಪರಿಹಾರ ನೀಡಲಾಗಿದೆಯೇ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ಹೌದು. ಕಳೆದ ಒಂದು ವರ್ಷದಲ್ಲಿ ಕಚ್ಚಾ ಮಾಲಿನ ಬೆಲೆ ಶೇ. 10 ರಿಂದ 20 ರಷ್ಟು ಜಾಸ್ತಿಯಾಗಿದ್ದು ಮತ್ತು 2 ವರ್ಷದಿಂದ ಬರಗಾಲ ಇರುವುದರಿಂದ ನೇಕಾರರು ತಯಾರಿಸಿದ ಪಕ್ಕಾ ಮಾಲು, ಮಾರಾಟವಾಗದೆ ದಾಸ್ತಾನು ಉಳಿದಿದ್ದು, ನೇಕಾರರಿಗೆ ತೊಂದರೆ ಆಗಿದ್ದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಬೆಳಗಾಂ ಜಿಲ್ಲೆಯಲ್ಲಿ ಒಟ್ಟು 07 ನೇಕಾರರು ಆತ್ಮಹತ್ಯೆ ಪ್ರಕರಣಗಳಿವೆ.

2001-02	-	5 ಜನ
2002-03	-	2 ಜನ

ಇ) ರಾಜ್ಯದ ಕೈಮಗ್ಗ ಅಭಿವೃದ್ಧಿ ನಿಗಮ, ಕಾವೇರಿ ಹ್ಯಾಂಡ್‌ಲೂಂ ಮತ್ತು ಕೈಮಗ್ಗ ನೇಕಾರರ ಸಹಕಾರ ಸಂಘಗಳ ಉಳಿಕೆ ದಾಸ್ತಾನು ಮಾರಾಟ ಮಾಡಲು ಹಾಗೂ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೆಳಗೆ ನಮೂದಿಸಿದಂತೆ ಕ್ರಮ ಜರುಗಿಸಲಾಗಿದೆ.

1. ಮಾರಾಟ ವರ್ಧನೆಗಾಗಿ ಕ್ರಮ ತೆಗೆದುಕೊಳ್ಳಲಾಗಿದ್ದು ಮಾರಾಟಕ್ಕೆ ಶೇ. 10ರ ವಿಶೇಷ ರಿಯಾಯ್ತಿ ಮಂಜೂರು ಮಾಡಲು ಆದೇಶ ನೀಡಲಾಗಿದೆ.
2. ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಸರ್ವಾಂಗೀಣ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ದೀನ ದಯಾಳ ಹತಖರ್ಗಾ ಯೋಜನೆಯಡಿ ಸಹಕಾರಿ ಸಂಘಗಳಿಗೆ ಹಣಕಾಸಿನ ಸೌಲಭ್ಯ ನೀಡಲಾಗಿದೆ.
3. ವಸತಿ-ವ-ಕಾರ್ಯಾಗಾರ, ನೇಕಾರರ ಆರೋಗ್ಯ ಬುತ್ತಿ, ಕಲ್ಯಾಣ ಕಾರ್ಯಕ್ರಮ, ಮಿತವ್ಯಯ ನಿಧಿ ಯೋಜನೆ, ಗುಂಪು ವಿಮಾ ಉಳಿತಾಯ ಯೋಜನೆ, ಸೀರೆ, ಧೋತಿ (ಎಸ್.ಎಸ್.ಡಿಎಸ್) ವಿದ್ಯಾ ವಿಕಾಸ ಯೋಜನೆ ಹಾಗೂ ಜಿಲ್ಲಾ ವಲಯ ಯೋಜನೆಗಳ ಮುಖಾಂತರ ಸಹಾಯ ಸವಲತ್ತುಗಳನ್ನು ನೀಡಲಾಗುತ್ತಿದೆ.

ಈ) ಮೃತ ನೇಕಾರ ಕುಟುಂಬಗಳಿಗೆ ಈ ಇಲಾಖೆಯಿಂದ ಯಾವುದೇ ಪರಿಹಾರ ನೀಡಲಾಗಿರುವುದಿಲ್ಲ.

ಪಶುಪಾಲನಾ ಹಾಗೂ ಪಶುವೈದ್ಯ ಸೇವಾ ಇಲಾಖೆಯ ಹುದ್ದೆಗಳು

2098 (2289) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಶುಪಾಲನಾ ಹಾಗೂ ಪಶುವೈದ್ಯ ಸೇವಾ ಇಲಾಖೆಯಲ್ಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು; (ಹುದ್ದೆವಾರು ವಿವರ ನೀಡುವುದು);

ಆ) ಎಷ್ಟು ಹುದ್ದೆಗಳು ಖಾಲಿ ಇವೆ; ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು;

ಇ) ಪಶುಪಾಲನಾ ಇಲಾಖೆಯಿಂದ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ; (ವಿವರಗಳನ್ನು ನೀಡುವುದು);

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಒಟ್ಟು ಹುದ್ದೆಗಳ ಸಂಖ್ಯೆ - 16028

ಹುದ್ದೆವಾರು ವಿವರ ಅನುಬಂಧ - 1ರಲ್ಲಿ ನೀಡಲಾಗಿದೆ.

ಆ) ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ - 4133

ಈ ಹುದ್ದೆಗಳನ್ನು ಭರ್ತಿ ಮಾಡುವ ವಿಷಯ ಪರಿಶೀಲನೆಯಲ್ಲಿದೆ.

ಇ) ವಿವರಗಳನ್ನು ಅನುಬಂಧ - 2ರಲ್ಲಿ ನೀಡಲಾಗಿದೆ.

ಅನುಬಂಧ - 1

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2289

ದಿನಾಂಕ 28-2-2003 ರಂತೆ ಪಶುಪಾಲನಾ ಇಲಾಖೆಯಲ್ಲಿ ಇರುವ ಖಾಲಿ ಹುದ್ದೆಗಳ ವಿವರ

ಕ್ರಮ ಸಂಖ್ಯೆ	ಪದನಾಮ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿ ಹುದ್ದೆಗಳು
1.	ನಿರ್ದೇಶಕರು	1	1	0
2.	ಅಪರ ನಿರ್ದೇಶಕರು	2	2	0
3.	ಜಂಟಿ ನಿರ್ದೇಶಕರು	9	7	2
4.	ಉಪ ನಿರ್ದೇಶಕರು	53	53	0
5.	ಆರ್ಥಿಕ ಸಹಾಯಕರು	1	1	0
6.	ಕೇಂದ್ರ ಕಛೇರಿ ಸಹಾಯಕರು	2	1	1
7.	ಆಡಳಿತ ಸಹಾಯಕರು	11	11	0
8.	ಸಹಾಯಕ ನಿರ್ದೇಶಕರು	474	405	69
9.	ಸಹಾಯಕ ನಿರ್ದೇಶಕರು (ಅಂಕಿ ಅಂಶ)	4	2	2
10.	ಪಶುವೈದ್ಯಾಧಿಕಾರಿ	1675	897	778*
11.	ಪಶುವೈದ್ಯಕೀಯ ಮೇಲ್ವಿಚಾರಕರು	266	108	158
12.	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	2101	1820	281
13.	ಪಶುವೈದ್ಯಕೀಯ ಪರೀಕ್ಷಕರು	1656	1311	345
14.	ಪಶುವೈದ್ಯಕೀಯ ಸಹಾಯಕರು	2442	1421	1021*
15.	ಅಧೀಕ್ಷಕರು	73	62	11
16.	ಪ್ರಥಮ ದರ್ಜೆ ಸಹಾಯಕರು	195	191	4

1	2	3	4	5
17.	ದ್ವಿತೀಯ ದರ್ಜೆ ಸಹಾಯಕರು	235	204	31
18.	ಶೀಘ್ರಲಿಪಿಗಾರರು	15	10	5
19.	ಬೆರಳಚ್ಚುಗಾರರು	110	95	15
20.	ವಾಹನ ಚಾಲಕರು	301	219	82
21.	ಡಿ ದರ್ಜೆ ನೌಕರರು	6304	5042	1262
22.	ಇತರೆ ವೃಂದ	98	32	66
		16028	**11895**	**4133**

*210 ಪಶುವೈದ್ಯಾಧಿಕಾರಿಗಳು ಹಾಗೂ 311 ಪಶುವೈದ್ಯ ಸಹಾಯಕರು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ಅನುಬಂಧ 2

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2289

1. ಜಾನುವಾರುಗಳಿಗೆ ಆರೋಗ್ಯ ರಕ್ಷಣೆ ಮತ್ತು ಮುಂಜಾಗ್ರತಾ ಕ್ರಮವಾಗಿ ರೋಗ ನಿರೋಧಕ ಲಸಿಕೆ ಹಾಕುವ ಕಾರ್ಯಕ್ರಮ
2. ತಳಿ ಅಭಿವೃದ್ಧಿಗಾಗಿ ಕೃತಕ ಗರ್ಭಧಾರಣಾ ಕಾರ್ಯಕ್ರಮ
3. ಸಂಚಾರಿ ಪಶು ಚಿಕಿತ್ಸಾಲಯ ಸೌಲಭ್ಯ
4. ತರಬೇತಿ ಮತ್ತು ವಿಸ್ತರಣಾ ಕಾರ್ಯಕ್ರಮ
5. ಕುರಿ ಮತ್ತು ಉಣ್ಣೆ ಅಭಿವೃದ್ಧಿ ಕಾರ್ಯಕ್ರಮ ಹಾಗೂ ಯಾಂತ್ರಿಕ ಉಣ್ಣೆ ಕಟಾವು ತರಬೇತಿ
6. ಕುಕ್ಕುಟ ಅಭಿವೃದ್ಧಿ ಕಾರ್ಯಕ್ರಮಗಳು
7. ಹಂಧಿ ಸಾಕಾಣಿಕೆ ಮತ್ತು ತಳಿ ಅಭಿವೃದ್ಧಿ ಕಾರ್ಯಕ್ರಮ
8. ಮೊಲಸಾಕಾಣಿಕೆ ಮತ್ತು ತಳಿ ಅಭಿವೃದ್ಧಿ ಕಾರ್ಯಕ್ರಮ
9. ಮೇವು ಅಭಿವೃದ್ಧಿ ಕಾರ್ಯಕ್ರಮ ಮತ್ತು ಒಣಮೇವು ಪೌಷ್ಠೀಕರಣ
10. ಬರಡು ರಾಸು ಚಿಕಿತ್ಸಾ ಶಿಬಿರಗಳು / ಆರೋಗ್ಯ ತಪಾಸಣಾ ಶಿಬಿರಗಳು
11. ಉತ್ತಮ ರಾಸುಗಳ ಪ್ರದರ್ಶನ
12. ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳ ಅನುಷ್ಠಾನ (ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ಟಗರು, ಹಂಧಿ, ಗಿರಿರಾಜ ಕೋಳಿ ಘಟಕಗಳು)
13. ರೋಗ ತಪಾಸಣೆ ಪ್ರಯೋಗಾಲಯಗಳ ಸ್ಥಾಪನೆ
14. ಮಿಗಮಾನವ ರೋಗಗಳಾದ ಕ್ಷಯ, ಕಂದು ರೋಗ ನಿಯಂತ್ರಣ
15. ಬೀದಿನಾಯಿ ನಿಯಂತ್ರಣ ಕಾರ್ಯಕ್ರಮ
16. ಖಿಸಾಯಿಖಾನೆಗಳ ಆಧುನೀಕರಣ